


ಎಲ್ಲ ರೂಪಬಹುತ್ವಗಳನ್ನು ತನ್ನೊಳಗೆ ಧಾರಣ ಮಾಡಿಕೊಂಡಿರುವ ಬಯಲಿಗೆ ರೂಪವಿಲ್ಲ. ಆಲಯಗಳ ರೂಪ ಆಕೃತಿಗಳು ಪ್ರಮಾಣಕ್ಕೆ ಅಳವಡುವಂಥವು. ಆದರೆ ಬಯಲು ಅಪ್ರಮಾಣು. ಹೀಗಾಗಿ ಅಪ್ರಮಾಣುವಿನೊಳಗೆ ಈ ಪ್ರಮಾಣುಗಳು; ಇವು ಬಯಲಿನೊಳಗಿನ ಆಲಯಗಳು. ಇಂದಲ್ಲ ನಾಳೆ ಬಯಲಿನೊಳಗೆ ಬಯಲಾಗುವ ಆಲಯಗಳು. ಈ ಆಲಯಗಳೊಳಗಿನ ಜೀವ ಜಂತುಗಳೂ ಅಷ್ಟೇ ಇಂದು ಇದ್ದು ನಾಳೆ ಬಯಲಾಗುವ ಬಗೆ ವಿನ್ಯಾಸಗಳು.

**ಬಟ್ಟ ಬಯಲ ಮಹಾಮನೆಯೊಳಗೊಂದು**
**ಹುಟ್ಟದ ಹೊಂದದ ಶಿಶುವ ಕಂಡೆ**
**ಮುಟ್ಟಿ ಪೂಜಿಸ ಹೋದಡೆ**
**ನೆಟ್ಟನೆ ಆ ಶಿಶು ತನ್ನುವ ನುಂಗಿತ್ತು**
**ಮುಟ್ಟಲಿಲ್ಲ ನೋಡಲಿಲ್ಲ, ಪೂಜೆಗೆ ಕಟ್ಟಳೆ**
**ಮುನ್ನಿಲ್ಲ.**
**ಗುಹೇಶ್ವರ ಬಯಲು.**

ಬಯಲೊಳಗಿನ ಸೃಷ್ಟಿ ವಿನ್ಯಾಸವನ್ನೂ ಆ ವಿನ್ಯಾಸದ ಇರುವಿಕೆಯ ವಿಸ್ಮಯಸ್ವಾರಸ್ಯವನ್ನು ಅಲ್ಲಮ ಪ್ರಭುಗಳು ರೂಪಕದ ಭಾಷೆಯಲ್ಲಿ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಹುಟ್ಟದ ಹೊಂದದ ಶಿಶುವ ಕಾಣುವುದು. ಹೊರಗಣ್ಣಿಗೆ ಅಂದರೆ ಮಣ್ಣಿನ ಕಣ್ಣಿಗೆ ಸಾಧ್ಯವಾಗದುದು. ಅದನ್ನು ಕಾಣಲು ಬಯಲುಗಣ್ಣೇ ಬೇಕು. ವಿಚಿತ್ರವೆಂದರೆ ಅದನ್ನು ಕಂಡೆನೆನ್ನುವಷ್ಟರಲ್ಲಿ ಅದರೊಳಗೆ ಇದು ಇಲ್ಲವಾಗಿರುತ್ತದೆ. ಅದೇ ಆಗಿ ಹೋಗುತ್ತದೆ. ಅದೇ ಆಗುವುದು ಅಂದರೆ ಆಗಿ ಹೋಗುವುದು. ಆಗುವುದು ಸ್ಥಾವರ, ಹೋಗುವುದು ಜಂಗಮ. ಹೀಗಾಗಿ ಬಯಲು ಕೂಡ ಜಂಗಮ. ಈ ಜಂಗಮ ಸ್ವರೂಪದ ಅರಿವು ನಮಗಾಗಬೇಕಾದರೆ ಇದೇ ಶರಣರು ನಡೆಸಿದ ಅನುಭವ ಮಂಟಪದ ಪರಿಕಲ್ಪನೆಯನ್ನು ಅರಿವಿಗೆ ಒಮ್ಮೆ ತಂದುಕೊಂಡರೆ ಸಾಕು, ಬಯಲು ಜಂಗಮಗಳ ಅನುಭಾವಿಕತ್ವ ನಮಗೆ ವೇದ್ಯವಾಗುತ್ತದೆ.

ಶರಣರು ನಡೆಸಿದ ಅನುಭಾವಿಕಗಳೇ ಅನುಭವ ಮಂಟಪಗಳು. ಸ್ಥಾವರ ವಿರೋಧಿಗಳಾದ ಶರಣರು ಎಲ್ಲೂ ಅನುಭವ ಮಂಟಪವೆನ್ನುವ ಆಲಯವನ್ನು ಕಟ್ಟಲಿಲ್ಲ. ಬಯಲಿನಾಲಯದೊಳಗೆ ಬಯಲ ಜಂಗಮವಾಗಿ ಅನುಭವ ಮಂಟಪ ಮೂಡುತ್ತಿತ್ತು. ಅಂದು ಕೂಡಿದ ಶರಣರ ಸಮೂಹವೇ ಅಂದಿನ ಅನುಭವ ಮಂಟಪ. ಅಂದಂದಿನ ದಂದುಗನಾಗಿ ಅದು ಮೂಡುತ್ತಿತ್ತು, ಮತ್ತೆ ಬಯಲಾಗುತ್ತಿತ್ತು. ಅಗತ್ಯವೆನ್ನಿಸಿದಾಗ ಅಥವಾ ನಿಗದಿತವಾಗಿದ್ದಾಗ ಒಂದು ಕಡೆ ಅಥವಾ ಅಗತ್ಯಕ್ಕನುಕೂಲವಾದ ಕಡೆ ಮತ್ತೆ ಕೂಡುವುದು ಕಳೆಯುವುದು ಗಳಿಸುವುದು, ಬೆಳೆಸುವುದು ಕೊಡುವುದು ಪಡೆವುದು ಈ ಪ್ರಕ್ರಿಯಾ ಮೀಮಾಂಸೆಯಲ್ಲಿ ಬಯಲೊಳಗಿನ ಬಯಲೇ ಅನುಭವ ಮಂಟಪ. ಇದು ಜಂಗಮ. ಇದು ಅರೂಪ. ಇದು ಬಯಲು. ಶರಣರ ಬಯಲತತ್ವವನ್ನು ಬದುಕಾಗಿಸಿದಂತೆ ಲಕ್ಷ್ಯ ಲಕ್ಷಣವೇ ಆಗಿ ಸಾಗಿದ್ದು ಅನುಭವ ಮಂಟಪ.